**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 54/2023**

**ಚಾ.ಸಾಃ 8, ಫ್ರಾ.ಸಾಃ 4**

| | |
|---|---|
| ಸಾಕ್ಷಿದಾರನ ಹೆಸರು | ವಾಸುದೇವ ಭಟ್ಟ |
| ತಂದೆಯ ಹೆಸರು | ಪರಮೇಶ್ವರ ಭಟ್ಟ |
| ವಯಸ್ಸು | 66 ವರ್ಷಗಳು |
| ಉದ್ಯೋಗ | ಮನೆಕೆಲಸ |
| ವಾಸ್ತವ್ಯ | ಯಲಗುಪ್ಪಾ, ದಿಬ್ಬಣಗಲ್, ತಾಃ ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 17-12-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿದ್ದೇನೆ. ದಿನಾಂಕ 06-03-2023 ರಂದು ಬೆಳಿಗ್ಗೆ 10-30 ರ ಸಮಯಕ್ಕೆ ನಮ್ಮ ಮನೆಯ ಹತ್ತಿರದಲ್ಲಿರುವ ಚಾಸಾ-1 ರವರ ಮನೆಯ ಹತ್ತಿರ ಹೋದಾಗ ಹಿಂದಿನ ದಿನ ಅವರ ಮನೆಯಲ್ಲಿ ಕಳ್ಳತನ ಆಗಿರುವುದಾಗಿ ಅಲ್ಲಿ ಜನ ಸೇರಿದ್ದರು ಮತ್ತು ಪೋಲೀಸರು ಬಂದಿದ್ದರು. ನಾನು ವಿಚಾರಿಸಿದಾಗ ಚಾಸಾ-1 ರವರ ಮನೆಯಲ್ಲಿ ಹಣ ಕಳ್ಳತನ ಆಗಿದೆ ಎಂದು ಹೇಳಿದರು. ಚಾಸಾ-1 ರವರ ಮನೆಯ ಹಂಚನ್ನು ತೆಗೆದು ಯಾರೋ ಮನೆಯ ಒಳಕ್ಕೆ ಬಂದು ಕಳ್ಳತನ ಮಾಡಿದ್ದರು. ಪೋಲೀಸರು ಅದನ್ನೆಲ್ಲ ವಿಚಾರಿಸಿ ಒಂದು ಪಂಚನಾಮೆ ಮಾಡಿರುತ್ತಾರೆ. ನಂತರ ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದು ಅಲ್ಲಿ ಪೋಲೀಸರು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ತೋರಿಸಿ ಆತನನ್ನು ಮತ್ತು ಕೃತ್ಯಕ್ಕೆ ಬಳಸಿದ್ದ ಬೈಕನ್ನು ಹಿಡಿದಿದ್ದೇವೆ ಎಂದು ಹೇಳಿ ಬೈಕನ್ನು ತಮ್ಮ ವಶಕ್ಕೆ ಪಡೆದು ಬೈಕಿನ ಫೋಟೋ ತೆಗೆದು ಒಂದು ಪಂಚನಾಮೆಗೆ ಸಹಿ ಹಾಕಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ನಿಪಿ-7 ಎಂದು, ಸಾಕ್ಷಿ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಬೈಕನ್ನು ನೋಡಿದರೆ ಗುರುತಿಸುತ್ತೇನೆ. ನಿಪಿ-5 ವತ್ತು 6 ಫೋಟೋ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಯು. ಬಿ. ನಾಯ್ಕರಿಂದಃ**

ಚಾಸಾ-1 ರವರ ಮನೆಯ ಹತ್ತಿರ ನನ್ನನ್ನು ಯಾರೂ ಕರೆದಿಲ್ಲ. ಅಲ್ಲಿ ಜನ ಸೇರಿದ್ದನ್ನು ನೋಡಿ ನಾನು ಹೋಗಿರುತ್ತೇನೆ. ಅಲ್ಲಿ ಸುಮಾರು 8-10 ಜನ ಸೇರಿರುತ್ತಾರೆ. ಪೋಲೀಸರು ಸ್ಥಳ ಪಂಚನಾಮೆಗೆ ನನ್ನ ಸಹಿ ತೆಗೆದುಕೊಂಡಿಲ್ಲ. ಸದರಿ ಪಂಚನಾಮೆಗೆ ನಾನು ಯಾವುದೇ ಮಾಹಿತಿ ನೀಡಿರುವುದಿಲ್ಲ. ಠಾಣೆಗೆ ಬರುವಂತೆ ನನಗೆ ಪೋಲೀಸರು ಕರೆದಿರುತ್ತಾರೆ. ಅಮಾನತ್ತು ಪಂಚನಾಮೆಗೆ ನಾನು ಯಾವುದೇ ಮಾಹಿತಿ ನೀಡಿರುವುದಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾರ ಹೇಳಿಕೆಯನ್ನೂ ಪಡೆದಿಲ್ಲ.

ಪೋಲೀಸರು ನನ್ನನ್ನು ಕರೆದು ಬೈಕ್ ಹತ್ತಿರ ನಿಲ್ಲಿಸಿ ಒಂದು ಫೋಟೋ ತೆಗೆದುಕೊಳ್ಳಬೇಕು ಅಂತ ಕೇಳಿದ್ದರಿಂದ ನಾನು ನಿಂತುಕೊಂಡಿದ್ದೇನೆ. ಚಾಸಾ–1 ಮತ್ತು ನಾನು ಪರಿಚಯಸ್ಥರು. ಚಾಸಾ–1 ಪರಿಚಯಸ್ಥರಾಗಿರುವುದರಿಂದ ಅಮಾನತ್ತು ಪಂಚನಾಮೆಯ ಯಾವ ವಿಚಾರಗಳು ನನಗೆ ಗೊತ್ತಿಲ್ಲದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**